ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೋದ್ಯಮಿಗಳಿಗೆ ಬಾಕಿ ನೀಡಬೇಕಾದ ಸಹಾಯಧನದ ಮೊತ್ತವೆಷ್ಟು?

ಆ) ಈ ಬಾಕಿ ನೀಡಬೇಕಾದ ಸಹಾಯಧನವನ್ನು ಎಂದು ಬಿಡುಗಡೆ ಆಗುವುದು?

ಶ್ರೀ ಎಸ್.ಆರ್.ಕಾಶಪ್ಪನವರ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):

ಅ) ರಾಜ್ಯದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ 31.3.2001ರ ಅಂತ್ಯಕ್ಕೆ ಸುಮಾರು ರೂ.338.57 ಕೋಟಿ ಸಹಾಯಧನ ನೀಡಲು ಬಾಕಿ ಇರುತ್ತದೆ. ಇದರಲ್ಲಿ ರೂ.10.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನು ಬಾಕಿ ರೂ.328.57 ಕೋಟಿಗಳನ್ನು ಬಿಡುಗಡೆ ಮಾಡಬೇಕಾಗಿದೆ.

ಆ) 2001-02ನೇ ಆರ್ಥಿಕ ಸಾಲಿನಲ್ಲಿ ಆಯವ್ಯಯದಲ್ಲಿ ರೂ.25.00 ಕೋಟಿಗಳನ್ನು ಸಣ್ಣ ಕೈಗಾರಿಕೆಗಳಿಗೆ ಸಹಾಯಧನ ಬಿಡುಗಡೆಗಾಗಿ ಅನುದಾನವನ್ನು ಒದಗಿಸಲಾಗಿದೆ. ಈಗಾಗಲೇ ರೂ.10.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಉಳಿದ ರೂ.15.00 ಕೋಟಿಗಳನ್ನು ಶೀಘ್ರವೇ ಬಿಡುಗಡೆ ಮಾಡಲಾಗುವುದು ಮತ್ತು ಪೂರ್ಣ ಸಹಾಯಧನ ಬಿಡುಗಡೆ ಮಾಡಲು ವಿಶೇಷ ಪ್ರಯತ್ನ ಮಾಡಲಾಗುತ್ತಿದೆ.

ರೇಷ್ಮೆ ಕಾಯಿದೆ ಪರಿಷ್ಕರಿಸುವುದು.

1925(2644)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಕಾಯಿದೆಯನ್ನು ಪರಿಷ್ಕರಿಸಲಾಗುತ್ತಾ ಇದೆಯೇ?

ಆ) ಹಾಗಿದ್ದಲ್ಲಿ ಇದರ ವಿವರಗಳೇನು?

ಶ್ರೀ ಎಂ.ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ರಾಜ್ಯದ ರೇಷ್ಮೆ ಕೃಷಿಯಲ್ಲಿ ಉದ್ಯಮದ ಸಮಗ್ರ ಅಭಿವೃದ್ಧಿಯ ಹಿನ್ನೆಲೆಯಲ್ಲಿ

ಕರ್ನಾಟಕ ರೇಷ್ಮೆ ಹುಳುಪನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು, ಕಾಯಿದೆ 1959ಕ್ಕೆ ಹಲವು ತಿದ್ದುಪಡಿಗಳನ್ನು ತರಲು ಉದ್ದೇಶಿಸಲಾಗಿದೆ.

ಆ) ರಾಜ್ಯದ ರೇಷ್ಮೆ ಬೆಳೆಗಾರರು, ರೇಷ್ಮೆ ಮೊಟ್ಟೆ ತಯಾರಕರು, ರೀಲರ್‌ಗಳು, ವರ್ತಕರು ಮತ್ತು ನೇಯ್ಗೆದಾರರ ಪ್ರತಿನಿಧಿಗಳ ಸಭೆ ಕರೆದು ಅವರ ಅಭಿಪ್ರಾಯಗಳು ಹಾಗೂ ವಿಶ್ವ ವ್ಯಾಪಾರ ಒಪ್ಪಂದ ಜಾರಿಗೆ ಬರುತ್ತಿರುವ ಹಿನ್ನಲೆಯಲ್ಲಿ ರಾಜ್ಯದ ರೇಷ್ಮೆ ವ್ಯವಸಾಯದಲ್ಲಿ ತೊಡಗಿರುವವರೆಲ್ಲರ ಹಿತಾಸಕ್ತಿ ಕಾಪಾಡಿ ರೇಷ್ಮೆ ವ್ಯವಸಾಯದ ಸಮಗ್ರ ಅಭಿವೃದ್ಧಿಗಾಗಿ ತಿದ್ದುಪಡಿಗಳನ್ನು ತರಲು ಉದ್ದೇಶಿಸಲಾಗಿದೆ.

ಸರ್ಕಾರಿ ಸ್ವಾಮ್ಯದ ರೇಷ್ಮೆ ಬಿತ್ತನೆ ಕೋಠಿಗಳ ವಿವರ.

1926(2566)

ಶ್ರೀ ಬಿ.ಎನ್.ಬಚ್ಚೇಗೌಡ(ಹೊಸಕೋಟೆ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಸ್ವಾಮ್ಯದ ರೇಷ್ಮೆ ಬಿತ್ತನೆ ಕೋಠಿಗಳ ಸಂಖ್ಯೆ ಎಷ್ಟು; ವರ್ಷಕ್ಕೆ ಎಷ್ಟು ರೇಷ್ಮೆ ಬಿತ್ತನೆ ಮೊಟ್ಟೆಗಳನ್ನು ಉತ್ಪಾದಿಸಲಾಗುತ್ತಿದೆ; ವಿವರ ನೀಡುವುದು;

ಆ) ರಾಜ್ಯದಲ್ಲಿ ಪರವಾನಿಗೆ ಪಡೆದಿರುವ ಖಾಸಗಿ ರೇಷ್ಮೆ ಬಿತ್ತನೆ ಕೋಠಿಗಳ ಸಂಖ್ಯೆ ಎಷ್ಟು; ಇವರು ವರ್ಷಕ್ಕೆ ಎಷ್ಟು ರೇಷ್ಮೆ ಬಿತ್ತನೆ ಮೊಟ್ಟೆಗಳನ್ನು ಉತ್ಪಾದನೆ ಮಾಡಲಾಗುತ್ತಿದೆ ತಿಳಿಸಿ.

ಇ) ಇತ್ತೀಚೆಗೆ ರೇಷ್ಮೆ ಬಿತ್ತನೆ ಕೋಠಿಗಳ ಗುಣಮಟ್ಟ ಕಳಪೆಯಿಂದಾಗಿ ರೈತರ ಬೆಳೆಗಳು ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ ಏನೇನು ಕ್ರಮಗಳನ್ನು ಕೈಗೊಳ್ಳಲಾಗಿದೆ?

ಉ) ಬೈವೊಲ್ಟೈನ್ ರೇಷ್ಮೆ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಕಾರ್ಯಕ್ರಮಗಳೇನು, ವಿವರ ನೀಡುವುದು;

ಊ) ಸಮಗ್ರ ರೇಷ್ಮೆ ಕೃಷಿಯ ಹೊಸ ನೀತಿಯೇನಾದರೂ ಸರ್ಕಾರ ರೂಪಿಸಿದೆಯೇ ಇದ್ದರೆ ವಿವರ ನೀಡುವುದು?